ಓ ಎಸ್ ನಂ 349/2020

ಡಿ. ಡಬ್ಲ್ಯೂ ಃ 1

ದಿಃ 22.11.2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಪ್ರತಿವಾದಿ ಪರ ಶ್ರೀ ಕೆ ಆರ್ ಸಿ  ವಕೀಲರಿಂದ

ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರಿಕೆ ಸಲ್ಲಿಸಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಚಾರಗಳು ಸತ್ಯವಾಗಿರುತ್ತದೆ. ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಸದರಿ ಪ್ರಮಾಣ ಪತ್ರಿಕೆಯನ್ನು ನನ್ನ ಮುಖ್ಯ ವಿಚಾರಣೆ ಎಂದು ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ.

ದಾವಾ ಸ್ವತ್ತುಗಳ ಆರ್ ಟಿ ಸಿ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಡಿ 1 ರಿಂದ ನಿ ಡಿ 8 ಎಂದು, ನಮ್ಮ ಕುಟುಂಬದ ವಂಶವೃಕ್ಷದ ದೃಢೀಕರಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಡಿ 9 ಎಂದು, ವಾಸಸ್ಥಳ ದೃಢೀಕರಣ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಡಿ  10 ಎಂದು, ನನ್ನ ಸವತಿಯ ಮರಣ ಪ್ರಮಾಣಪತ್ರವನ್ನು ಕೊಟ್ಟಿದ್ದು ಅದನ್ನು ನಿ ಡಿ 11 ಎಂದು, ನನ್ನ ಗಂಡನ ಮರಣ ಪ್ರಮಾಣಪತ್ರವನ್ನು ಕೊಟ್ಟಿದ್ದು ಅದನ್ನು ನಿ ಡಿ 12 ಎಂದು, ದಿನಾಂಕ ಃ28.06.2017 ರ ದೃಢೀಕೃತ ವಿಲ್ ಪತ್ರವನ್ನು ಕೊಟ್ಟಿದ್ದು ಅದನ್ನು ನಿ ಡಿ  13 ಎಂದು, ಓ ಎಸ್ 19/2018 ರಲ್ಲಿ ಆದೇಶ ಪುಟದ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಡಿ 14 ಎಂದು, ವಾದಪತ್ರದ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿಡಿ 15 ಎಂದು, ಆ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳು ಸಲ್ಲಿಸಿದ್ದ ರಾಜಿ ಅರ್ಜಿಯ ದೃಢೀಕೃತ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಡಿ 16 ಎಂದು, ಡಿಕ್ರಿಯ ಪ್ರತಿಯನ್ನು ಕೊಟ್ಟಿದ್ದು ಅದನ್ನು ನಿ ಡಿ 17 ಎಂದು,  ಜಯಮ್ಮ ಇವರ ಹೆಸರಿನಲ್ಲಿ ಆದ ಸಾಗುವಳಿ ಚೀಟಿಯನ್ನು ಕೊಟ್ಟಿದ್ದು ಅದನ್ನು ನಿ ಡಿ 18 ಎಂದು , ಮುತ್ತುರಾಜು ಇವರ ಹೆಸರಿನಲ್ಲಿ ಆದ ಸಾಗುವಳಿ ಚೀಟಿಯನ್ನು ನಿ ಡಿ 19 ಎಂದು, ಕುಟುಂಬದ ಪಡಿತರ ಚೀಟಿಯನ್ನು ನಿ ಡಿ 20 ಎಂದು, ಮತದಾರರ ಗುರುತಿನ ಚೀಟಿಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಡಿ  21 ರಿಂದ  23 ಎಂದು, ಆಧಾರ್ ಕಾರ್ಡ್ ಗಳನ್ನು ಕೊಟ್ಟಿದ್ದು ಅವುಗಳನ್ನು ನಿ ಡಿ  24 ರಿಂದ ನಿ ಡಿ 26 ಎಂದು ಗುರುತಿಸಲಾಯಿತು. ವಾದಿಯ ದಾವೆಯನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತೇನೆ.

ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ಉಖ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,

ಮಾಗಡಿ.